ಪ್ರಾಧಿಕಾರದಿಂದ ಕೈಗೊಳ್ಳಲಾಗಿದೆ. 19.76ಕಿ.ಮೀ. ಉದ್ದದ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ. ಈ ಭಾಗದ ರಸ್ತೆಯನ್ನು ಕೂಡ ಬಲಪಡಿಸಿ ಅಭಿವೃದ್ಧಿ ಮಾಡಬೇಕಾಗಿದೆ.

ಈ) ಸರ್ಕಾರಿ ಆದೇಶ ಸಂ: ಪಿಡಬ್ಲ್ಯೂ ಡಿ:174:ಸಿಎನ್‌ಆಥ್:95 ದಿನಾಂಕ 14-11-95ರ ಪ್ರಕಾರ ಮೈಸೂರು ರಸ್ತೆಯ ಜಂಕ್ಷನ್‌ನಿಂದ ಹೊಸೂರು ರಸ್ತೆಯ ಜಂಕ್ಷನ್‌ವರೆವಿಗೆ ಹೊಸ ವರ್ತುಲ ರಸ್ತೆಯ ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಅವರಿಗೆ ವಹಿಸಲಾಗಿದೆ.

**ರಾಜ್ಯದ ಆರ್ಥಿಕ ಸ್ಥಿತಿಗಳ ವಿವರ**

89 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಹಣಕಾಸು ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *15ನೇ ಜನವರಿ 1996 ರಂದು ಕರ್ನಾಟಕ ಸರ್ಕಾರದ ಆರ್ಥಿಕ ಸ್ಥಿತಿಗತಿಗಳ ವಿವರಗಳೇನು?*

*(ಬ್ಯಾಂಕ್ ಬ್ಯಾಲೆನ್ಸ್, ಟ್ರೈಜರಿ ಬ್ಯಾಲೆನ್ಸ್ ಇತ್ಯಾದಿ ವಿವರ ನೀಡಿ).*

ಆ) *15-1-1996ರ ವರೆಗೆ ಎಷ್ಟು ಓವರ್ ಡ್ರಾಫ್ಟ್ ಪಡೆಯಲಾಗಿದೆ. 1994-95 ಹಾಗೂ 1995-96ರಲ್ಲಿ ಎಷ್ಟು ಓವರ್ ಡ್ರಾಫ್ಟ್ ಪಡೆಯಲಾಗಿದೆ.*

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿಗಳು) :

ಅ) ದಿನಾಂಕ: 15-1-1996 ರಂದು ಕರ್ನಾಟಕ ಸರ್ಕಾರವು 6.46 ಕೋಟಿ ರೂಪಾಯಿಗಳ ಅರ್ಥೋಪಾಯ ಮುಂಗಡವನ್ನು ಪಡೆದಿದೆ.

ಆ) 1995-96ನೇ ಸಾಲಿನಲ್ಲಿ ದಿನಾಂಕ: 15-1-96ರ ವರೆಗೂ ಯಾವುದೇ ಓವರ್ ಡ್ರಾಫ್ಟ್‌ನ್ನು ರಾಜ್ಯ ಸರ್ಕಾರವು ಪಡೆದಿಲ್ಲ.

## ಪ್ರಕಟಣೆಗಳು

**20.2.96ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು.**

1994-95ನೇ ಸಾಲಿನಲ್ಲಿ ರೂ. 4,46,69,71000 (ರೂ. ನಾಲ್ಕೂನೂರ ನಲವತ್ತಾರು ಕೋಟಿ ಅರವತ್ತೊಂಬತ್ತು ಲಕ್ಷ ಎಪ್ಪತ್ತೊಂದು ಸಾವಿರಗಳು ಮಾತ್ರ)ಗಳ ಸಂಚಿತ (Cumulative) ಓವರ್ ಡ್ರಾಫ್ಟ್ ಪಡೆಯಲಾಗಿದೆ.

ಅಧ್ಯಕ್ಷರು : ಮಂಡಿಸಲಾಯಿತು.

**ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರ ರಾಜೀನಾಮೆ**

ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರು ವಿಧಾನ ಸಭೆಯ ಸದಸ್ಯತ್ವಕ್ಕೆ ನೀಡಿದ ರಾಜೀನಾಮೆಯನ್ನು ದಿನಾಂಕ 17-2-96ರಂದು ಅಂಗೀಕರಿಸಲಾಗಿದೆ.

## ಸಭೆಯ ಮುಂದಿಡಲಾದ [illegible]ಗಳು

ದಿನಾಂಕ 20-2-1996 ರಂದು ನಡೆದ ಸಭೆಯ [illegible] ಸಮಿತಿಯ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಈ ಕೆ[illegible]ನ್ನು ನಡೆಸಲು ತೀರ್ಮಾನಿಸಲಾಯಿತು.